**ಆಕಾಶವಾಣಿ 03.04.2026**

**ಪ್ರದೇಶ ಸಮಾಚಾರ 07.05 A.M.**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

- **ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್:** ಬಯೋಗಾಸ್‌ನಿಂದ, ಕಲಬುರಗಿ ಜಿಲ್ಲೆಯ ಕೃಷಿಕ, ನವೀನ ಕುಲಕರ್ಣಿ, ಇಂಧನ ಸ್ವಾವಲಂಬಿ.
- **ಶೇಂಗಾ ಬೆಳೆ ವಿಸ್ತೀರ್ಣ ಹೆಚ್ಚಿಸಿ,** ಖಾದ್ಯ ತೈಲದ ಆಮದು ಕಡಿಮೆ ಮಾಡಬಹುದು – ವಿಜ್ಞಾನಿ ಎಸ್.ಕೆ. ಬೇರಾ.
- **ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ,** 'ತ್ರಿವಳಿ ತಜ್ಞರ'ಲಭ್ಯತೆ ಖಾತ್ರಿ ಪಡಿಸಲು, ಆರೋಗ್ಯ ಇಲಾಖೆ, ಯೋಜನೆ.
- **ಇಂದು ಶುಭ ಶುಕ್ರವಾರ:**ಕ್ರೈಸ್ತ ಬಾಂಧವರಿಂದ ಪ್ರಾರ್ಥನೆ.

<><><>

**ಈಗ ವಾರ್ತೆಗಳ ವಿವರ**

<><><>

**ಕಲಬುರಗಿ ಜಿಲ್ಲೆ, ಸೇಡಂ ತಾಲೂಕು,** ಭೀಮಸಾಗರ ಗ್ರಾಮದ, ಪ್ರಗತಿಪರ ಕೃಷಿಕ ಹಾಗೂ ವೃತ್ತಿಯಿಂದ, ತಂತ್ರಾಂಶ ಅಭಿಯಂತರ, ನವೀನ ಕುಲಕರ್ಣಿ, ಜೈವಿಕ ಅನಿಲ, ಬಯೋಗ್ಯಾಸ್ ಉತ್ಪಾದಿಸಿ, ಅಡುಗೆ ಅನಿಲ ಬಳಕೆಯಲ್ಲಿ ಸ್ವಾವಲಂಬಿಯಾಗಿದ್ದಾರೆ. ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್ ಯೋಜನೆ ಅಡಿ, ತಮ್ಮ ಹೆಸರು ನೋಂದಾಯಿಸಿದ್ದಾರೆ.

**ಮಂಡ್ಯ ಮೂಲದ ತಂತ್ರಜ್ಞರು,** 'ಸಿಸ್ಟೆಮಾ 12' ಮಾದರಿಯ, ಜೈವಿಕ ಅನಿಲ ಘಟಕವನ್ನು ನಿರ್ಮಿಸಿದ್ದು, ಪ್ರತಿ ತಿಂಗಳು, ಗೃಹ ಬಳಕೆಯ, ಎರಡು ಗ್ಯಾಸ್ ಸಿಲಿಂಡರ್‌ನಷ್ಟು ಅಡುಗೆ ಅನಿಲ, ಉತ್ಪಾದನೆಯಾಗುತ್ತಿದೆ.

**ಕೇವಲ 12 ಸಾವಿರ ರೂಪಾಯಿ ವೆಚ್ಚದಲ್ಲಿ** ರೂಪಿತವಾದ, ಬಯೋ ಗ್ಯಾಸ್ ಘಟಕದ ಸ್ಲರಿ, 10 ಎಕರೆ ಕಬ್ಬು, 20 ಎಕರೆ ತೋಟದಲ್ಲಿ, ಐನೂರು ಮಾವಿನ ಗಿಡ ಹಾಗೂ ಇನ್ನೂರು ನಿಂಬೆ ಗಿಡಗಳನ್ನು ಪೋಷಿಸುತ್ತಿದೆ.

**ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ,** ಮಾಹಿತಿ ನೀಡಿದ್ದಾರೆ, ಯುವ ಕೃಷಿಕ ನವೀನ ಕುಲಕರ್ಣಿ

<><><>

**ಶೇಂಗಾದಲ್ಲಿ ಶೇಕಡ 50 ರಷ್ಟು,** ಎಣ್ಣೆ ಅಂಶವಿದ್ದು, ಶೇಂಗಾ ಬೆಳೆ ವಿಸ್ತೀರ್ಣ ಹೆಚ್ಚಿಸಿ, ದೇಶದ ಖಾದ್ಯ ತೈಲದ ಅವಶ್ಯಕತೆಯನ್ನು, ಬಹುಮಟ್ಟಿಗೆ ಪೂರೈಸಬಹುದು ಮತ್ತು ಆಮದು ಅವಲಂಬನೆ, ಕಡಿಮೆ ಮಾಡಬಹುದು ಎಂದು, ಜುನಾಗಡನ, ಭಾರತೀಯ ಶೇಂಗಾ ಸಂಶೋಧನಾ ಸಂಸ್ಥೆ, ನಿರ್ದೇಶಕ ಎಸ್.ಕೆ. ಬೇರಾ ಹೇಳಿದ್ದಾರೆ.

ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ಮೊದಲ ಉಪ ಕುಲಪತಿ, ದಿವಂಗತ, ಜೆ.ವಿ.ಗೌಡರ, ಜನ್ಮದಿನದ ಹಿನ್ನೆಲೆ, ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಸಭಾಂಗಣದಲ್ಲಿ, ವಿಶೇಷ ಉಪನ್ಯಾಸ, ನೀಡಿದರು.

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಂಚಾಲಿತ, I.I.G.R. ಸಂಸ್ಥೆಯಿಂದ ಅಭಿವೃದ್ಧಿಪಡಿಸಲಾದ, ಹೈ ಓಲಿಕ್ ಆಮ್ಲ ಹಾಗೂ ಹೆಚ್ಚಿನ ಉತ್ಪಾದನಾ ಸಾಮರ್ಥ್ಯ ಹೊಂದಿರುವ, 'ಗಿರ್ನಾರ್–4 ಮತ್ತು 5' ಶೇಂಗಾ ತಳಿಗಳನ್ನು, ಪ್ರಧಾನಮಂತ್ರಿಯವರು, 17 ಬಯೋ–ಫೋರ್ಟಿಫೈಡ್ ಬೆಳೆಗಳೊಂದಿಗೆ ಬಿಡುಗಡೆ ಮಾಡಿದ್ದಾರೆ ಎಂದು, ಎಸ್.ಕೆ. ಬೇರಾ ತಿಳಿಸಿದರು.

ರಾಜ್ಯದಲ್ಲಿ, ಶೇಂಗಾ ಬೆಳೆ ವಿಸ್ತೀರ್ಣ ಕುಗ್ಗುತ್ತಿರುವ ಹಿನ್ನೆಲೆ, ಸಾಂಪ್ರದಾಯಿಕ ಪ್ರದೇಶಗಳಲ್ಲಿ, ಶೇಂಗಾ ಬೆಳೆಯ ವಿಸ್ತೀರ್ಣ ಮತ್ತು ಉತ್ಪಾದನೆಯನ್ನು ಹೆಚ್ಚಿಸುವಂತೆ, ಅವರು ಕರೆ ನೀಡಿದರು.

**ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್** ಇಲಾಖೆ, ತೆರಿಗೆ ಸಂಗ್ರಹ ಮತ್ತು ಕಂದಾಯ ಸಂಗ್ರಹದಲ್ಲಿ, ಕರ್ನಾಟಕ ರಾಜ್ಯ, ಸತತ ಎರಡನೇ ವರ್ಷವೂ, ದೇಶದಲ್ಲೇ ಅತ್ಯುತ್ತಮ ಸಾಧನೆ ಮಾಡಿದ, ರಾಜ್ಯವಾಗಿ ಹೊರಹೊಮ್ಮಿದೆ ಎಂದು, ಇಲಾಖೆ ಸಚಿವ, ಪ್ರಿಯಾಂಕ ಖರ್ಗೆ, ತಿಳಿಸಿದ್ದಾರೆ.

2025–26 ನೇ ಸಾಲಿಗೆ 1 ಸಾವಿರದ 3 ನೂರಾ 82 ಕೋಟಿ 57 ಲಕ್ಷ ರೂಪಾಯಿ ತೆರಿಗೆ ಸಂಗ್ರಹವಾಗಿದ್ದು, ಒಟ್ಟು ಸಾವಿರದ 560 ಕೋಟಿ ರೂಪಾಯಿ ತೆರಿಗೆ ಬೇಡಿಕೆಯ ಪೈಕಿ, ಈಗಾಗಲೇ ಶೇಕಡ 81 ರಷ್ಟು ಸಾಧಿಸಲಾಗಿದೆ ಎಂದು, ಫೇಸ್‌ಬುಕ್‌ನಲ್ಲಿ ಹೇಳಿದ್ದಾರೆ.

ಸಂಗ್ರಹವಾದ ಪ್ರತಿಯೊಂದು ರೂಪಾಯಿ, ಹಳ್ಳಿಗಳ ಸಮಗ್ರ ಅಭಿವೃದ್ಧಿಗಾಗಿ ಮರಳಿ ವಿನಿಯೋಗವಾಗುತ್ತಿದೆ. ಗ್ರಾಮಗಳ ಸರ್ವತೋಮುಖ ಪ್ರಗತಿಗೆ ನಾಂದಿಯಾಗಿದೆ, ಎಂದಿದ್ದಾರೆ.

**'ಯುವ ವಿಜ್ಞಾನಿ' ಯೋಜನೆ ಅಡಿ,** 9ನೇ ತರಗತಿಯ, ಆಯ್ದ ವಿದ್ಯಾರ್ಥಿಗಳಿಗೆ, ವಿಜ್ಞಾನ ವಿಷಯದಲ್ಲಿ, ಆಸಕ್ತಿ ಮೂಡಿಸಲು, ವಿಶೇಷ ಒತ್ತು ನೀಡಲಾಗುತ್ತಿದೆ ಎಂದು, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ, ಜಿತೇಂದ್ರಸಿಂಗ್ ತಿಳಿಸಿದ್ದಾರೆ.

ರಾಜ್ಯಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಅವರು, 'ಯುವಿಕ' ಯೋಜನೆ, 2019ರಲ್ಲಿ ಆರಂಭವಾಗಿದೆ. ಯಶಸ್ವಿಯಾಗಿ ಮುಂದುವರಿಯುತ್ತಿದ್ದು, ಪ್ರತಿ ವರ್ಷ, ಎಲ್ಲ ರಾಜ್ಯಗಳಿಂದ ತಲಾ 10 ವಿದ್ಯಾರ್ಥಿಗಳು, ಕೇಂದ್ರಾಡಳಿತ ಪ್ರದೇಶಗಳಿಂದ, ತಲಾ 8 ವಿದ್ಯಾರ್ಥಿಗಳನ್ನು ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ದೇಶದ ಪ್ರತಿಷ್ಠಿತ ಬಾಹ್ಯಾಕಾಶ ಮತ್ತು ವಿಜ್ಞಾನ ಕೇಂದ್ರಗಳಲ್ಲಿ, ಉತ್ತಮ ಶಿಕ್ಷಣ ನೀಡಲಾಗುತ್ತಿದೆ ಎಂದರು.

**ಜೀವವೈಧ್ಯತೆ ಕಾಯ್ದೆ 2022ರ ಅಡಿ,** ಜೀವವೈವಿಧ್ಯ ಜಾಗೃತಿ ಮತ್ತು ಸಂರಕ್ಷಣೆಗಾಗಿ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ, ಕಾರ್ಯಯೋಜನೆ ರೂಪಿಸಲಾಗುತ್ತಿದೆ ಎಂದು, ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆ ಸಚಿವ, ಕೀರ್ತಿವರ್ಧನ್ ಸಿಂಗ್, ತಿಳಿಸಿದ್ದಾರೆ.

ರಾಜ್ಯಸಭೆಯ ಪ್ರಶ್ನೋತ್ತರ ವೇಳೆಯಲ್ಲಿ, ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಜೀವವೈವಿಧ್ಯತೆ ಕುರಿತು, ಶೈಕ್ಷಣಿಕ ಕಾರ್ಯಕ್ರಮ ಮತ್ತು ಸಮುದಾಯ ಪಾಲ್ಗೊಳ್ಳುವಿಕೆ ಮೂಲಕ, ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ರಾಜ್ಯದ ಸಮುದಾಯ ಆರೋಗ್ಯ ಕೇಂದ್ರಗಳ,** ತಜ್ಞ ವೈದ್ಯರನ್ನು, ಪ್ರಾಥಮಿಕ ಹಾಗೂ ತಾಲೂಕು ಆರೋಗ್ಯ ಕೇಂದ್ರಗಳಿಗೆ, ಮರು ಹೊಂದಾಣಿಕೆ ಮೂಲಕ, ಗ್ರಾಮೀಣ ಭಾಗದ ಜನರಿಗೆ, 'ತ್ರಿವಳಿ ತಜ್ಞರ'ಲಭ್ಯತೆ ಖಾತ್ರಿ ಪಡಿಸಲು, ಆರೋಗ್ಯ ಇಲಾಖೆ ಯೋಜಿಸಿದೆ.

ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ವಿಕಾಸಸೌಧದಲ್ಲಿ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ, ಸ್ತ್ರೀ ಆರೋಗ್ಯ ತಜ್ಞರು, ಚಿಕ್ಕಮಕ್ಕಳ ವೈದ್ಯರು, ಕ್ಷಕಿರಣ ಮತ್ತು ಅರವಳಿಕೆ ತಜ್ಞರ ಲಭ್ಯತೆ, ಖಾತ್ರಿ ಪಡಿಸಲು, ಸಭೆ ನಡೆಸಿದರು.

ಗರ್ಭಿಣಿಯರು ಹಾಗೂ ಬಾಣಂತಿಯರಿಗೆ, ತಮ್ಮ ಮನೆ ಹತ್ತಿರದ ಆಸ್ಪತ್ರೆಗಳಲ್ಲೇ, ಯಾವುದೇ ಅಡೆತಡೆಯಿಲ್ಲದೇ, ದಿನದ 24 ಗಂಟೆಯೂ, ಹೆರಿಗೆ ಮತ್ತು ತುರ್ತು ಚಿಕಿತ್ಸೆ ಸಿಗುವಂತಾಗಬೇಕು. ಯಾವ ಮಗುವೂ ಅನಾಥವಾಗಬಾರದು ಎನ್ನುವ ಸದುದ್ದೇಶದಿಂದ, ವ್ಯವಸ್ಥಿತವಾಗಿ ಅನು ್ಠಾನಗೊಳಿಸಲಾಗುತ್ತಿದೆ ಎಂದು, ಸಚಿವ ದಿನೇಶ ಎಕ್ಸ್ ಖಾತೆಯಲ್ಲಿ ತಿಳಿಸಿದ್ದಾರೆ.

**ರಾಜ್ಯದಲ್ಲಿ ಶೇಕಡ 67ಕ್ಕಿಂತ,** ಹೆಚ್ಚು ಗರ್ಭಿಣಿಯರು, ರಕ್ತಹೀನತೆಯಿಂದಬಳಲುತ್ತಿರುವುದು, ಆತಂಕಕಾರಿ ವಿಷಯ; ಅನಿಮಿಯಾದಿಂದ, ಬಳಲುತ್ತಿರುವ ತಾಯಂದಿರ, ಮಕ್ಕಳ ಆರೋಗ್ಯದ ಬಗ್ಗೆಯೂ, ನಾವು ಚಿಂತಿಸಬೇಕಾಗಿದೆ ಎಂದು, ರಾಜ್ಯ ಮುಖ್ಯ ಕಾರ್ಯದರ್ಶಿ, ಶಾಲಿನಿ ರಜನೀಶ ಕಳವಳ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ, ರಾಜೀವ ಗಾಂಧಿ, ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಚಾಲನೆ ನೀಡಿ, ಅವರು ಮಾತನಾಡಿದರು.

**ಇಂದು ಶುಭ ಶುಕ್ರವಾರ.**ಈ ದಿನ ಯೇಸು ಕ್ರಿಸ್ತನನ್ನು, ಶಿಲುಬೆಗೇರಿಸಲ್ಪಟ್ಟ ದಿನವಾಗಿ,ಸ್ಮರಿಸಲಾಗುತ್ತದೆ.

ಕ್ರೈಸ್ತ ಬಾಂಧವರು, ಈ ದಿನವನ್ನು ಶಾಂತವಾಗಿ, ಪ್ರಾರ್ಥನೆ ಮತ್ತು ಉಪವಾಸದ ಮೂಲಕ ಆಚರಿಸುತ್ತಾರೆ.

ಶುಭ ಶುಕ್ರವಾರ, ಯೇಸು ಕ್ರಿಸ್ತರ ಹೋರಾಟ ಮತ್ತು ತ್ಯಾಗವನ್ನು ನೆನಪಿಸುತ್ತದೆ.

ನಾಳೆ ಪವಿತ್ರ ಶನಿವಾರ. ಮೌನ ಮತ್ತು ನಿರೀಕ್ಷೆಯ ದಿನ. ಯೇಸು ಕ್ರಿಸ್ತನ ಪುನರುತ್ಥಾನದ ನಿರೀಕ್ಷೆ ಅಂತ್ಯವಾಗುವುದು, ಈಸ್ಟರ್ ಭಾನುವಾರದಲ್ಲಿ. ಯೇಸು ಮರಣವನ್ನು ಜಯಿಸಿ, ಪುನರುತ್ಥಾನಗೊಂಡ, ಸಂತೋ ದ ದಿನ.

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ,** ಫಾತಿಮಾ ಪದವಿ ಮಹಾವಿದ್ಯಾಲಯದ, ಪ್ರಾಚಾರ್ಯ, ಫಾದರ್ ಲೂಕಸ್, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಫಾದರ್ ಲೂಕಸ್ ಧ್ವನಿ 60 ಸೆಕೆಂದುಗಳು**

<><><>

**ಗುಡ್ ಫ್ರೈಡೇ ಹಿನ್ನೆಲೆ, ಪ್ರಯಾಣಿಕರ ದಟ್ಟಣೆ ನಿರ್ವಹಿಸಲು,** ನೈಋತ್ಯ ರೇಲ್ವೆ, ಎಸ್.ಎಂ.ವಿ.ಟಿ. ಬೆಂಗಳೂರು ಮತ್ತು ಸಂತ್ರಾಗಾಚಿ ರೈಲು ನಿಲ್ದಾಣಗಳ ನಡುವೆ, ಒಂದು ಟ್ರಿಪ್ ವಿಶೇ  ರೈಲು ಸೇವೆ ಕಲ್ಪಿಸಿದೆ.

**ಹಾವೇರಿ ಜಿಲ್ಲೆ, ಸವಣೂರ ತಾಲೂಕು,** ಕಾರಡಗಿ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ, ಇಂದು ಸಂಜೆ ಕಡುಬಿನ ಕಾಳಗ, ಪಲ್ಲಕ್ಕಿ ಸೇವೆ ಹಾಗೂ ರಥೋತ್ಸವ ಜರುಗಲಿದೆ.

**ವಿಜಯನಗರ ಜಿಲ್ಲೆ,** ಹೊಸಪೇಟೆ ತಾಲೂಕು, ಹಂಪಿಯ ಶ್ರೀ ವಿರೂಪಾಕ್ಷೇಶ್ವರ ಬ್ರಹ್ಮ ರಥೋತ್ಸವ, ವಿಜೃಂಭಣೆಯಿಂದ ಜರುಗಿತು.

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ,** ಬಿಜೆಪಿ ನಾಯಕರ ಟೀಕೆ ಸಮಂಜಸವಲ್ಲ ಎಂದು, ಸಚಿವ ಸಂತೋ  ಲಾಡ, ಬಾಗಲಕೋಟೆಯಲ್ಲಿ ಹೇಳಿದ್ದಾರೆ.

**ರಾಮನಗರ ಜಿಲ್ಲೆಯ, ಪ್ರಮುಖ ಪ್ರವಾಸಿ ತಾಣಗಳಲ್ಲಿ,** 24 ಪ್ರವಾಸಿ ಮಿತ್ರರನ್ನು ನಿಯೋಜಿಸಲಾಗಿದೆ; ಮಕ್ಕಳ ಸಹಾಯವಾಣಿ 1–0–9–8 ನ್ನು ಅಳವಡಿಸಲಾಗಿದೆ ಎಂದು, ಪ್ರವಾಸೋದ್ಯಮ ಇಲಾಖೆಯ, ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

**ಬೆಳಗಾವಿ ಜಿಲ್ಲಾ ಸಹಕಾರಿ ಬ್ಯಾಂಕ್,** ಪ್ರಸಕ್ತ ಸಾಲಿನಲ್ಲಿ, 6 ಸಾವಿರದ 703 ಕೋಟಿಗೂ ಅಧಿಕ ಹಣ ಸಂಗ್ರಹಿಸಿದೆ ಎಂದು, ಬ್ಯಾಂಕಿನ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ತಿಳಿಸಿದ್ದಾರೆ.

**ಧಾರವಾಡ ಜಿಲ್ಲೆಯ, ವಿವಿಧ ತಾಲೂಕುಗಳ,** 90 ಗ್ರಾಮಗಳಲ್ಲಿ, ಕುಡಿಯುವ ನೀರಿನ ತೊಂದರೆ ಗುರುತಿಸಿದ್ದು, 186 ಕೊಳವೆ ಬಾವಿಗಳ ಮೂಲಕ, ನೀರು ಪೂರೈಸಲು, ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು, ಜಿಲ್ಲಾಧಿಕಾರಿ ಆರ್.ಸ್ನೇಹಲ್ ತಿಳಿಸಿದ್ದಾರೆ.

**ಕೇಂದ್ರ ವಾರ್ತಾ ಮತ್ತು ಪ್ರಸಾರ** ಸಚಿವಾಲಯದ ಕಾರ್ಯದರ್ಶಿಯಾಗಿ, ಚಂಚಲ್ ಕುಮಾರ್ ಅಧಿಕಾರ ವಹಿಸಿಕೊಂಡಿದ್ದಾರೆ. ಬಿಹಾರ ಕೇಡರ್‌ನ 1992ರ ಬ್ಯಾಚ್‌ನ ಐ.ಎ.ಎಸ್. ಅಧಿಕಾರಿಯಾಗಿದ್ದಾರೆ.

**ಹರ್ಷ/ಹೊಂಗಲ್/ಪ್ರಕಟಣೆ/ಪಿಟಿಸಿ ವಿಜಯನಗರ (04)/ಬಾಗಲಕೋಟೆ (06)/ರಾಮನಗರ (03)/ಬೆಳಗಾವಿ (02)/ಕೆ.ವಾ.ಇ.ಧಾ./ಪಿಐಬಿ/**

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್:** ಬಯೋಗಾಸ್‌ನಿಂದ, ಕಲಬುರಗಿ ಜಿಲ್ಲೆಯ ಕೃಷಿಕ, ನವೀನ ಕುಲಕರ್ಣಿ, ಇಂಧನ ಸ್ವಾವಲಂಬಿ.
- **ಶೇಂಗಾ ಬೆಳೆ ವಿಸ್ತೀರ್ಣ ಹೆಚ್ಚಿಸಿ,** ಖಾದ್ಯ ತೈಲದ ಆಮದು ಕಡಿಮೆ ಮಾಡಬಹುದು – ವಿಜ್ಞಾನಿ ಎಸ್.ಕೆ. ಬೇರಾ.
- **ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ,** ‘ತ್ರಿವಳಿ ತಜ್ಞರ’ಲಭ್ಯತೆ ಖಾತ್ರಿ ಪಡಿಸಲು, ಆರೋಗ್ಯ ಇಲಾಖೆ, ಯೋಜನೆ.
- **ಇಂದು ಶುಭ ಶುಕ್ರವಾರ:**ಕ್ರೈಸ್ತ ಬಾಂಧವರಿಂದ ಪ್ರಾರ್ಥನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಬೆಂಗಳೂರು, ಮಲ್ಲೇಶ್ವರಂನ, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ,** ರೋಗಿಗಳ ಸುರಕ್ಷತೆ ಮತ್ತು ಡಯಾಲಿಸಿಸ್ ಆರೈಕೆಯ ಗುಣಮಟ್ಟ ಖಾತ್ರಿ ಪಡಿಸಲು, ಕೃತಕ ಬುದ್ಧಿಮತ್ತೆ ಸಂಚಾಲಿತ, ‘ಸ್ಮಾರ್ಟ್ ಮಾನಿಟರಿಂಗ್ ಪೋರ್ಟಲ್’ಗೆ, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವರು, ಕೆ.ಸಿ.ಜನರಲ್ ಆಸ್ಪತ್ರೆ ಮಟ್ಟದಲ್ಲಿ, ಈ ಹೊಸ ವಿಧಾನ, ಮತ್ತ ್ಟ ಬಲ ತುಂಬಲಿದೆ. ಡಯಾಲಿಸಿಸ್ ಸೇವೆಗಳ, ಮೇಲ್ವಿಚಾರಣೆ, ಲೋಪದೋ ’ ಗುರುತಿಸಿ, ತತ್‌ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಲು, ಈ ಮಾದರಿ ಸಹಕಾರಿಯಾಗಲಿದೆ, ಎಂದರು.

**ವಿದ್ಯಾರ್ಥಿಗಳು, ತಾವು ಶಿಕ್ಷಣ ಪಡೆದ ಸಂಸ್ಥೆಯ,** ಆದರ್ಶ ಹಾಗೂ ಮೌಲ್ಯಗಳನ್ನು ಪಾಲಿಸುತ್ತ, ಬದುಕಿನ ಎಲ್ಲ ಕ್ಷೇತ್ರಗಳಲ್ಲಿ, ಶ್ರೇ ್ಠತೆ ಸಾಧಿಸಲು ಶ್ರಮಿಸುವಂತೆ, ಸೈನಿಕ ಶಾಲೆಗಳು ಹಾಗೂ ರಾಷ್ಟ್ರೀಯ ಮಿಲಿಟರಿ ಶಾಲೆಗಳ, ನಿರ್ದೇಶಕ ವಿ.ಅಜಿತ್ ಕರೆ ನೀಡಿದರು.

ಕೊಡಗು ಜಿಲ್ಲೆ, ಕೂಡಿಗೆ ಸೈನಿಕ ಶಾಲೆಗೆ ಭೇಟಿ ನೀಡಿ, ಯುದ್ಧ ವೀರರ ಸ್ಮಾರಕಕ್ಕೆ ಗೌರವ ವಂದನೆ ಸಲ್ಲಿಸಿ, ಮಾತನಾಡಿದರು. ಕೊಡಗು ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರಜೀತ್ ಸಿಂಗ್ ಪಾಲ್ಗೊಂಡಿದ್ದರು.